**8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು.**

**ಪಿ.ಸಿ.ಆರ್.ನಂ.14845/2022**

**ಸಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರೀ ಮುನಿರತ್ನ |
| ತಂದೆಯ /ಗಂಡನ ಹೆಸರು | - | ಲೇಟ್ ಸುಬ್ರಮಣ್ಯ |
| ವಯಸ್ಸು | - | 51 ವರ್ಷ |
| ಕೆಲಸ | - | ಸಚಿವರು |
| ವಾಸ | - | ಮಲ್ಲೇಶ್ವರಂ, ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ 02-11-2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ (SWORN STATEMENT)**

ನಾನು ಸುಮಾರು ಒಂದು ವರ್ಷದಿಂದ ಕರ್ನಾಟಕ ರಾಜ್ಯ ಸರ್ಕಾರದ ತೋಟಗಾರಿಕೆ ಸಚಿವನಾಗಿರುತ್ತೇನೆ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವನಾಗಿರುತ್ತೇನೆ.

1 ನೇ ಆರೋಪಿ ರಾಜ್ಯ ಗುತ್ತಿಗೆದಾರ ಸಂಘದ ಅಧ್ಯಕ್ಷರು, 3 ರಿಂದ 10 ನೇ ಆರೋಪಿತರು ರಾಜ್ಯ ಗುತ್ತಿಗೆದಾರ ಸಂಘದ ಉಪಾಧ್ಯಕ್ಷರುಗಳು, 11 ನೇ ಆರೋಪಿ ಸದರಿ ಸಂಘದ ಕಾರ್ಯದರ್ಶಿ, 12 ನೇ ಆರೋಪಿ ಸದರಿ ಸಂಘದ ಖಜಾಂಚಿ. 13 ಮತ್ತು 14 ನೇ ಆರೋಪಿತರು ಸದರಿ ಸಂಘದ ಜಂಟಿ ಕಾರ್ಯದರ್ಶಿಗಳು. 15 ರಿಂದ 19 ನೇ ಆರೋಪಿತರು ಸದರಿ ಸಂಘದ ಸಂಘಟನಾ ಕಾರ್ಯದರ್ಶಿಗಳಾಗಿರುತ್ತಾರೆ.

ದಿನಾಂಕ 24-08-2022 ರಂದು 1 ನೇ ಆರೋಪಿ ಟಿ ವಿ ಮಾಧ್ಯಮದಲ್ಲಿ ಸಚಿವನಾದ ನಾನು ಕೋಲಾರದ ಜಿಲ್ಲಾ ಅಧಿಕಾರಿಗಳ ಮೂಲಕ ಹಣದ ಬೇಡಿಕೆ ಇಟ್ಟಿರುತ್ತೇನೆಂದು ಮಾತನಾಡಿದ್ದು, ಆಗ ಮಾಧ್ಯಮದವರು ಉಸ್ತುವಾರಿ ಸಚಿವರು ಯಾರೆಂದು ಪ್ರಶ್ನಿಸಿದಾಗ ಬಹಿರಂಗವಾಗಿ ನನ್ನ ಹೆಸರನ್ನು ಹೇಳುತ್ತಾರೆ. ನಾನು ಪ್ರತಿನಿಧಿಸುವ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ನಾನು ಹತ್ತು ಸಾವಿರ ಕೋಟಿ ವೆಚ್ಚ ಮಾಡಿರುತ್ತೇನೆ ಸದರಿ ಕಾಮಗಾರಿಗಳಲ್ಲಿ ಬಹಳಷ್ಟು ಅವ್ಯವಹಾರ ಮಾಡಿರುತ್ತೇನೆಂದು ಮಾಧ್ಯಮಗಳಿಗೆ ನನ್ನ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿರುತ್ತಾರೆ. ಮರುದಿನ ಎಲ್ಲಾ ಪತ್ರಿಕಾ ಮಾಧ್ಯಮಗಳಲ್ಲಿ ಆ

ಬಗ್ಗೆ ನನ್ನ ವಿರುದ್ಧ ವರದಿಯಾಗಿರುತ್ತದೆ. ಅದಕ್ಕೆ ಸಂಬಂಧ ಪಟ್ಟಂತೆ ಟಿ ವಿ ಮಾಧ್ಯಮಕ್ಕೆ ಅವರು ನೀಡಿರುವ ಹೇಳಿಕೆಗೆ ಸಂಬಂಧಿಸಿದ ಡಿವಿಡಿಯನ್ನು ಮತ್ತು ಪತ್ರಿಕಾ ಮಾಧ್ಯಮದಲ್ಲಿ ಪ್ರಕಟಗೊಂಡ ವರದಿಗಳ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಿನ ನಾನು ದೆಹಲಿಯಲ್ಲಿ ಇದ್ದು, ಅಲ್ಲಿಯೇ ಮಾಧ್ಯಮದವರು ನನ್ನನ್ನು ಆ ಬಗ್ಗೆ ಸಾರ್ವಜನಿಕವಾಗಿ ಪ್ರಶ್ನೆ ಮಾಡಿದ್ದು, ಆಗ ನಾನು ಆ ಬಗ್ಗೆ ನಾನು ಬೆಂಗಳೂರಿಗೆ ಹೋಗಿ ಪತ್ರಿಕಾ ಗೋಷ್ಠಿ ವಿವರಣೆ ನೀಡುತ್ತೇನೆಂದು ಹೇಳಿರುತ್ತೇನೆ. ಅದರಂತೆ ನಾನು ಮರುದಿನ ದೆಹಲಿಯಿಂದ ಬೆಂಗಳೂರಿಗೆ ಬಂದು ಪತ್ರಿಕಾ ಗೋಷ್ಠಿ ಕರೆದು, ಆರೋಪಿತರು ಮಾಡಿರುವ ಆರೋಪಗಳು ಆಧಾರರಹಿತವಾಗಿರುತ್ತವೆ, ಆ ಬಗ್ಗೆ ದಾಖಲೆಗಳು ಅಥವಾ ಯಾವುದೇ ಆಧಾರಗಳು ಇದ್ದರೆ ರಾಜ್ಯಪಾಲರಿಗೆ ಅಥವಾ ಲೋಕಾಯುಕ್ತರಿಗೆ ಅಥವಾ ಯಾವುದೇ ಸೂಕ್ತ ಪ್ರಾಧಿಕಾರ ಅಥವಾ ನ್ಯಾಯಾಲಯಕ್ಕೆ ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳಲಿ ಅಥವಾ ಮಾಧ್ಯಮಕ್ಕಾದರೂ ಅವುಗಳನ್ನು ಬಿಡುಗಡೆ ಮಾಡಲಿ ಎಂದು ತಿಳಿಸಿರುತ್ತೇನೆ. ಆ ಸಮಯದಲ್ಲಿ ಆರೋಪಿತರು ಆ ರೀತಿ ಆರೋಪಗಳನ್ನು ಸಾಬೀತು ಮಾಡುವ ದಾಖಲೆಗಳು ಹಾಗೂ ಆಧಾರಗಳನ್ನು ಒದಗಿಸದಿದ್ದಲ್ಲಿ ನಾನು ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುತ್ತೇನೆ ಮತ್ತು ಮಾನನಷ್ಟ ಮೊಕದ್ದಮೆ ಹೂಡುತ್ತೇನೆಂದು ಸ್ಪಷ್ಟವಾಗಿ ತಿಳಿಸಿರುತ್ತೇನೆ. ದಿನಾಂಕ 29-08-2022 ರಂದು ಆ ರೀತಿ ಆರೋಪಿತರಿಗೆ ವಕೀಲರ ಮೂಲಕ ನೋಟೀಸನ್ನು ಸಹ ನೀಡಿದ್ದು, ಅವುಗಳನ್ನು ನೋಂದಾಯಿತ ಅಂಚೆ ಮೂಲಕ, ಕೊರಿಯರ್ ಮೂಲಕ ಹಾಗೂ ವಾಟ್ಸಪ್ ಮೂಲಕ ಜಾರಿ ಮಾಡಿರುತ್ತೇನೆ. ಕೆಲವು ಆರೋಪಿತರಿಗೆ ಖುದ್ದಾಗಿ ಸದರಿ ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸಿನಲ್ಲಿ ಆರೋಪಿತರು ತಮ್ಮ ಸದರಿ ತಪ್ಪು ಹೇಳಿಕೆ ಅಥವಾ ಮಾಹಿತಿಗೆ ಕ್ಷಮೆ ಕೋರಿದರೂ ಸಹ ನಾನು ಮನ್ನಿಸುತ್ತೇನೆ ಎಂದು ತಿಳಿಸಿರುತ್ತೇನೆ.

ಆ ನಂತರವೂ ಸಹ ಆರೋಪಿತರು ಕೆಲವು ಪತ್ರಿಕೆಗಳಿಗೆ ತಾವು ಯಾವುದೇ ಕ್ರಮ ಎದುರಿಸಲು ಸಿದ್ಧರಿದ್ದೇವೆ ಎಂದು ಹಾಗೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡುತ್ತೇವೆ ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ಅವರು ಆ ರೀತಿ ಯಾವುದೇ ಪ್ರಾಧಿಕಾರಕ್ಕಾಗಲೀ ಮಾಧ್ಯಮಕ್ಕಾಗಲೀ ಆ ರೀತಿ ದಾಖಲೆ ಮತ್ತು ಆಧಾರಗಳನ್ನು ನೀಡದೇ ಇರುವುದರಿಂದ ನಾನು ಅವರ ವಿರುದ್ಧ ಅಸಲು ದಾವೆ ಸಂಖ್ಯೆ 5922/2022 ರಲ್ಲಿ ಮಾನನಷ್ಟ ಮೊಕದ್ದಮೆ ಹೂಡಿ 50 ಕೋಟಿ ಪರಿಹಾರ ಕೇಳಿರುತ್ತೇನೆ.

ನಾನು 2010 ರಿಂದ ಪಾಲಿಕೆ ಸದಸ್ಯನಾಗಿ, 3 ಬಾರಿ ಶಾಸಕನಾಗಿ ಹಾಗೂ ಸಚಿವನಾಗಿ ನನ್ನ ಕ್ಷೇತ್ರದ ಜನರಿಂದ ಆಯ್ಕೆಯಾಗಿ ನನ್ನ ಕ್ಷೇತ್ರವನು ಪ್ರತಿನಿಧಿಸಿರುತ್ತೇನೆ. ಆರೋಪಿತರು ಆ ರೀತಿ ನನ್ನ ವಿರುದ್ದ ಸುಳ್ಳು ಹೇಳಿಕೆಗಳು, ಮಾಹಿತಿಗಳು ಮತ್ತು ಅವಹೇಳನಕಾರಿ ಹೇಳಿಕೆಗಳನ್ನು ನೀಡಿರುವುದರಿಂದ ನನ್ನ ಕ್ಷೇತ್ರದ ಮತದಾರರು ಮತ್ತು ರಾಜ್ಯದ ಸಾರ್ವಜನಿಕರಲ್ಲಿ ನನ್ನ ಬಗ್ಗೆ ತಪ್ಪು ಅಭಿಪ್ರಾಯ ಮೂಡಿ ನನ್ನ ರಾಜಕೀಯ ವ್ಯಕ್ತಿತ್ವಕ್ಕೆ ಕುಂದುವುಂಟಾಗುವಂತೆ ಆಗಿರುತ್ತದೆ ಮತ್ತು ಅದರಿಂದ ನನ್ನ ಮುಂದಿನ ರಾಜಕೀಯ ಭವಿಷ್ಯಕ್ಕೆ ತೊಂದರೆಯಾಗುವ ಎಲ್ಲಾ ಸಾಧ್ಯತೆ ಇರುತ್ತದೆ. ಆ ರೀತಿ ಟಿ ವಿ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ವರದಿಯಾದ ನಂತರ ನನ್ನ ಕ್ಷೇತ್ರದ ಹಲವಾರು ಸಂಘ ಸಂಸ್ಥೆಯವರು, ಗಣ್ಯ ವ್ಯಕ್ತಿಗಳು ಮತ್ತು ನನ್ನ ಆಪ್ತ ಸ್ನೇಹಿತರು ಮತ್ತು ಸಂಬಂಧಿಕರು ಆ ರೀತಿ ಆರೋಪಗಳನ್ನು ಮಾಡಿರುವುದರಿಂದ ನೀನು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ನಿರಪರಾಧಿಯೆಂದು ನ್ಯಾಯಾಲಯದಿಂದ ಆದೇಶ ಪಡೆದು ನಮ್ಮ ಬಳಿ ಮತ ಕೇಳಲು ಬರಬೇಕೆಂದು ಹೇಳಿರುತ್ತಾರೆ. ಆ ರೀತಿ ನ್ಯಾಯಾಲಯದಿಂದ ಆದೇಶ ಬರದಿದ್ದರೇ ನಿಮ್ಮಂತಹವರು ಚುನಾವಣೆಗೆ ಸ್ಪರ್ಧಿಸಬಾರದೆಂದು ತುಚ್ಛವಾಗಿ ಹೇಳಿರುತ್ತಾರೆ. ನಿಮ್ಮ ಮೇಲೆ ಬಂದಿರುವ ಕಳಂಕದಿಂದ ಹೊರಬಂದು ನಮ್ಮ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಮತ್ತು ನಮ್ಮ ಕ್ಷೇತ್ರದ ಮತದಾರರನ್ನು ಮತ ಕೇಳಲು ಬರಬೇಕೆಂದು ಹೇಳಿರುತ್ತಾರೆ. ಅದಲ್ಲದೇ ನನ್ನ ಕುಟುಂದಲ್ಲೂ ಸಹ ನನ್ನ ಮಕ್ಕಳ ಭವಿಷ್ಯಕ್ಕೆ ಮತ್ತು ಮೊಮ್ಮಕ್ಕಳ ಭವಿಷ್ಯಕ್ಕೆ ಸಮಾಜದಲ್ಲಿ ತೊಂದರೆಯಾಗುತ್ತದೆ ಮತ್ತು ಅವರಿಗೂ ಕಳಂಕ ಬರುತ್ತದೆ. ಹಾಗಾಗಿ ನನ್ನ ಕುಟುಂಬದಲ್ಲಿಯೂ ಸಹ ನಾನು ಸದರಿ ಕಳಂಕದಿಂದ ಹೊರಬರದೇ ಇದ್ದರೇ ನನ್ನ ಗೌರವ ಕಡಿಮೆಯಾಗುತ್ತದೆ. ಹಾಗಾಗಿ ಆರೋಪಿತರ ವಿರುದ್ದ ನಾನು ಈ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದು, ಆರೋಪಿತರ ವಿರುದ್ದ ಈ ಘನ ನ್ಯಾಯಾಲಯವು ಸಂಜ್ಞೇ ತೆಗೆದುಕೊಂಡು ವಿಚಾರಣೆ ನಡೆಸಿ ಸೂಕ್ತ ಶಿಕ್ಷೆ ವಿಧಿಸಬೇಕೆಂದು ಕೋರುತ್ತೇನೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**8** ನೇ ಅ. ಮು. ಮ. ದಂ. ನ್ಯಾ